

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಬದುಕಿನ ತಿರುವುಗಳು

ರಾಮಾಯಣವನ್ನು ಓದಿದವರೆಲ್ಲರಿಗೂ ಸುಪರಿಚಿತವಾದ ಶ್ಲೋಕ:

**ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ ।**
**ಯತ್ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಮ್ ॥**

**(ಸುಖದ ಸಗ್ಗದೊಳು ನಲಿದಾಡುತಲಿದ್ದ ಕ್ರೌಂಚಪಕ್ಷಿಯನು**
**ಕೊಂದ ಬೇಡನೇ! ಸುಖದ ನೆಲೆ ಸಿಗದಂತಾಗಲಿ ನಿನಗೆ ಬಾಳಿನಲಿ!)**

ಇದು ಆದಿಕವಿ ಮಹರ್ಷಿ ವಾಲ್ಮೀಕಿಯ ಬಾಯಿಂದ ಹೊರಟ ಶೋಕಭರಿತ ಕ್ರೋಧದ ಉದ್ಗಾರ. ಅವರ ಶೋಕಕ್ಕೆ ಕಾರಣ? ತಮಸಾ ನದಿಯ ದಡದಲ್ಲಿ ವನದ ಸೊಬಗನ್ನು ಸವಿಯುತ್ತಾ ಮುಂದೆ ಸಾಗಿದ್ದ ಮಹರ್ಷಿಗಳ ಕಣ್ಣೆದುರಿಗೆ ಕ್ಷಣಾರ್ಧದಲ್ಲಿ ನಡೆದ ಒಂದು ಘನಘೋರ ಬರ್ಬರ ಕೃತ್ಯ. ಆಗಸದಲ್ಲಿ ಸಂತೋಷದಿಂದ ವಿಹರಿಸುತ್ತಿದ್ದ ಎರಡು ಕ್ರೌಂಚ ಪಕ್ಷಿಗಳಲ್ಲಿ ಒಂದನ್ನು ಬೇಡನೊಬ್ಬ ನಿಷ್ಕರುಣೆಯಾಗಿ ತನ್ನ ಬಾಣಗಳಿಂದ ಹೊಡೆದು ಉರುಳಿಸಿದ್ದ. ಹರಿತವಾದ ಬಾಣಗಳಿಂದ ಹತಗೊಂಡ ಗಂಡು ಹಕ್ಕಿಯು ಆಕ್ರಂದಿಸುತ್ತಾ ರಕ್ತಸಿಕ್ತವಾಗಿ ಕೆಳಗೆ ಬೀಳುತ್ತಲೇ ಹೆಣ್ಣು ಹಕ್ಕಿ ರೋದಿಸತೊಡಗಿತು. ಅದುವರೆಗೆ ಆನಂದದಿಂದ ನಲಿದಾಡುತ್ತಿದ್ದ ಪಕ್ಷಿಗಳ ಬಾಳು ನಿಷ್ಕಾರಣವಾಗಿ ದುರಂತದಲ್ಲಿ ಕೊನೆಗೊಂಡಿತ್ತು. ಈ ಭೀಕರ ದೃಶ್ಯ ಮಹರ್ಷಿ ವಾಲ್ಮೀಕಿಯ ಹೃದಯವನ್ನು ಕಲಕಿತು. ಬೇಡನು ಎಸಗಿದ ಅಮಾನುಷ ಕೃತ್ಯಕ್ಕೆ ಬೇಸತ್ತು 'ಆನಂದದಿಂದ ನಲಿದಾಡುತ್ತಿದ್ದ ಹಕ್ಕಿಯನ್ನು ಕೊಂದುಹಾಕಿದ ನಿನಗೆ ನಿನ್ನ ಬಾಳಿನುದ್ದಕ್ಕೂ ಸುಖದ ನೆಲೆ ಸಿಗದಂತಾಗಲಿ!' ಎಂದು ಶಪಿಸಿದರು. ಆ ಹೆಣ್ಣು ಹಕ್ಕಿಯ ಆಕ್ರಂದನವನ್ನು ಕೇಳಿ ತಾಳಲಾರದೆ ಅವರ ಅಂತಃಕರಣ ಹೀಗೆ ಮಿಡಿದಿತ್ತು. 'ಶೋಕಃ ಶ್ಲೋಕತ್ವಮಾಗತಃ'. ಶೋಕವೇ ಶ್ಲೋಕವಾಗಿ ರೂಪುಗೊಂಡಿತು. ಮುಂದೆ ರಾಮಾಯಣ ಮಹಾಕಾವ್ಯದ ರಚನೆಗೆ ನಾಂದಿಯಾಯಿತು.


ಕ್ರೌಂಚಪಕ್ಷಿಯ ಆರ್ತನಾದವನ್ನು ಕೇಳಿ ಮರುಗಿ ಬೇಡನಿಗೆ ಹಿಡಿಶಾಪ ಹಾಕಿದ ವಾಲ್ಮೀಕಿ ಮಹರ್ಷಿ ನಂತರ ಯೋಚಿಸಿ ಉದ್ವೇಗದಲ್ಲಿ ಹೀಗೆ ಮಾಡಬಾರದಾಗಿತ್ತೆಂದು ಪರಿತಪಿಸುತ್ತಾರೆ. ಅವರ ಸಾತ್ವಿಕ ಕ್ರೋಧದ ಮಾತುಗಳಿಂದ ಬೇಡನ ಮನಸ್ಸಿನ ಮೇಲೆ ಯಾವ ಪರಿಣಾಮ ಉಂಟಾಯಿತೆಂದು ಮೂಲರಾಮಾಯಣದಲ್ಲಾಗಲೀ, ಅದನ್ನು ಆಧರಿಸಿ ರಚಿತವಾದ ಇತರ ಪ್ರಾಚೀನ ಕಾವ್ಯಗಳಲ್ಲಾಗಲೀ ಉಲ್ಲೇಖವಿಲ್ಲ. ಕುವೆಂಪುರವರು ಮಾತ್ರ ತಮ್ಮ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಈ ಪ್ರಕರಣಕ್ಕೆ ಹೊಸತೊಂದು ರೂಪವನ್ನು ಕೊಟ್ಟಿದ್ದಾರೆ. 'ಮಾಣ್, ನಿಷಾದನೇ, ಮಾಣ್! ಕೊಲೆ ಸಾಲ್ಗುಮಯ್ಯೋ ಮಾಣ್!' ಎಂದು ಆ ಬೇಡನಿಗೆ ವಾಲ್ಮೀಕಿ ತಿಳಿಹೇಳುತ್ತಾನೆ. ನಾನೂ ಸಹ ಒಂದು ಕಾಲದಲ್ಲಿ ನಿನ್ನ ಹಾಗೆಯೇ 'ಕೊಲೆಯ ಕಲೆಯಲ್ಲಿ ಕೋವಿದನಾಗಿ' ನಂತರ ನಾರದ ಮಹರ್ಷಿಯ ಕೃಪೆಯಿಂದ 'ಕರುಣೆಯಂ ಕಲಿತೆನ್' ಎಂದು ವಾಲ್ಮೀಕಿ ತನ್ನ ಪೂರ್ವಜೀವನ ವೃತ್ತಾಂತವನ್ನು ನಿರೂಪಿಸಿ ಆ ಬೇಡನ ಮನಸ್ಸು ಕರುಗುವಂತೆ ಮಾಡುತ್ತಾನೆ. ಅದರ ಪೂರ್ಣ ವಿವರಗಳನ್ನು ಕುವೆಂಪು ನಿರೂಪಿಸಲು ಹೋಗಿಲ್ಲ.

ಎಲ್ಲರಿಗೂ ಗೊತ್ತಿರುವಂತೆ ವಾಲ್ಮೀಕಿಯೂ ಸಹ ಆರಂಭದಲ್ಲಿ ತನ್ನ ಹೆಂಡತಿ ಮಕ್ಕಳನ್ನು ಸಾಕಲು ದಾರಿಹೋಕರ ತಲೆ ಹೊಡೆದು ದೋಚುವ ಕಸುಬನ್ನು ರೂಢಿಸಿಕೊಂಡ ಬೇಡನಾಗಿದ್ದ. ಒಮ್ಮೆ ಅವನಿಗೆ ನಾರದ ಮಹರ್ಷಿಯ ಭೇಟಿಯಾಯಿತು. ತಲೆ ಹೊಡೆಯಲು ಬಂದ ಅವನನ್ನು ತಡೆದು ನಾರದ ಹೇಳಿದ: "ನೀನು ಈ ರೀತಿ ದಾರಿಹೋಕರ ಕೊಲೆ ಮಾಡಿ ಹೆಂಡತಿ ಮಕ್ಕಳನ್ನು ಸಾಕುವೆಯಲ್ಲಾ, ಅದರಿಂದ ಬರುವ ಪಾಪದಲ್ಲಿ ನಿನ್ನ ಹೆಂಡತಿ ಮಕ್ಕಳು ಪಾಲುದಾರರಾಗಲು ಸಿದ್ಧರಿದ್ದಾರೆಯೇ ಕೇಳಿ ನೋಡು". ನಾರದರನ್ನು ಮರಕ್ಕೆ ಕಟ್ಟಿಹಾಕಿ ಮನೆಗೆ ಬಂದು ಹೆಂಡತಿ ಮಕ್ಕಳನ್ನು ಕೇಳಿದಾಗ "ನಮ್ಮನ್ನು ಸಾಕಬೇಕಾದುದು ನಿನ್ನ ಕರ್ತವ್ಯ, ನಿನ್ನ ಪಾಪಕೃತ್ಯಗಳಿಗೆ ನೀನೇ ಹೊಣೆ, ನಾವೇಕೆ ಪಾಲುದಾರರಾಗಬೇಕು?" ಎನ್ನುತ್ತಾರೆ. ಇದರಿಂದ ಪಶ್ಚಾತ್ತಾಪಗೊಂಡು ಹಿಂದಿರುಗಿ ಬಂದು ನಾರದರ ಪಾದಕ್ಕೆ ಅಡ್ಡಬಿದ್ದು ಅವರಿಂದ 'ರಾಮ'ನಾಮದ ಉಪದೇಶ ಪಡೆದು ಅನೇಕ ವರ್ಷಗಳ ಕಾಲ ತಪಸ್ಸು ಮಾಡಿ ತನ್ನ ಮೈಮೇಲೆ ಬೆಳೆದ ಹುತ್ತ (ವಲ್ಮೀಕ) ದಿಂದ ಹೊರಬಂದು ವಾಲ್ಮೀಕಿ ಮಹರ್ಷಿಯಾದ.

ಸಾಮಾನ್ಯವಾಗಿ ಪ್ರತಿಯೊಬ್ಬ ವ್ಯಕ್ತಿಯಲ್ಲಿ ತನ್ನ ತಪ್ಪಿನ ಅರಿವಿರುತ್ತದೆ. ಅವನಲ್ಲಿ ಒಳ್ಳೆಯ ಗುಣ ಬಾಹ್ಯವಾಗಿ ಪ್ರಕಟವಾಗದಿದ್ದರೂ ಸುಪ್ತವಾಗಿರುತ್ತದೆ; ಜಾಗೃತಗೊಳ್ಳಲು ಅವನಿಗೆ ಅರಿವಿಲ್ಲದಂತೆಯೇ ಕಾಯುತ್ತಿರುತ್ತದೆ. ಯಾವುದೋ ಘಟನೆಯ ಪ್ರಭಾವದಿಂದ ಯಾವುದೋ ಸಂದರ್ಭದಲ್ಲಿ ಅದು ಪ್ರಕಟವಾಗುತ್ತದೆ. ವ್ಯಕ್ತಿಯ ಒಳ್ಳೆಯತನವು ಕೆಲವು ಅನಿರೀಕ್ಷಿತ ಘಟನೆಗಳಿಂದ ಬೆಂಕಿಗೆ ಹಾಕಿದ ಸಾಮ್ರಾಣಿಯು ಪರಿಮಳಿಸುವಂತೆ ಪ್ರಕಟಗೊಳ್ಳುತ್ತದೆ. ವ್ಯಕ್ತಿಯಲ್ಲಿ ಮೂಲಭೂತವಾಗಿ ಒಳ್ಳೆಯತನವೆಂಬುದು ಇಲ್ಲದಿದ್ದರೆ ಇದು ಸಾಧ್ಯವಾಗುವುದಿಲ್ಲ. ಸಾಮ್ರಾಣಿಯನ್ನು ಬಿಟ್ಟು ಬೇರೆ ಏನೇ ಬೆಂಕಿಗೆ ಹಾಕಿದರೂ ಹೊಗೆ ಬರುವುದಲ್ಲದೆ, ಪರಿಮಳ ಬಂದೀತೆ? ಮೂಲ ಸ್ವಭಾವವೇ ಕೆಟ್ಟದ್ದಾಗಿದ್ದರೆ ಪರಿವರ್ತನೆ ಅಸಾಧ್ಯ. ಉಣ್ಣೆ ಹಸುವಿನ ಕೆಚ್ಚಲಲ್ಲಿಯೇ ಇದ್ದರೂ ಅದು ಅಮೃತಸಮಾನವಾದ ನೊರೆವಾಲನ್ನು ಉಣ್ಣಲಾರದು. ಅದಕ್ಕೆ ನೊರೆವಾಲು ಬೇಡ, ಬಿಸಿನೆತ್ತರೇ ಬೇಕು! ಅಂತಹ ಜನರು ಎಷ್ಟೇ ಪ್ರೇರಣೆಗಳು ದೊರೆತರೂ ತಮ್ಮ ದುಷ್ಟತನದ ಹಾದಿಯನ್ನು ಬಿಟ್ಟು ಒಳ್ಳೆಯ ಹಾದಿಯನ್ನು ಹಿಡಿಯಲಾರರು.

ಜಲಾಶಯದಲ್ಲಿ ನಿಂತಿರುವ ನೀರು ಜಡವಾದಂತೆ, ಚೈತನ್ಯರಹಿತವಾಗಿರುವಂತೆ ಮೇಲುನೋಟಕ್ಕೆ ಕಂಡುಬಂದರೂ ಅಪಾರ ಚೈತನ್ಯವನ್ನು ತನ್ನೊಡಲಿನಲ್ಲಿ ತುಂಬಿಕೊಂಡಿರುತ್ತದೆ. ಅದು ಜಡಭರತನಂತೆ ನಿಂತಿರುವುದಕ್ಕೆ ಕಾರಣ ಅದನ್ನು ಬಂಧಿಸಿರುವ ಭೀಮಬಲದ ಅಣೆಕಟ್ಟು. ಅದರ ಕ್ರೆಸ್ಟ್‌ಗೇಟನ್ನು ಒಮ್ಮೆ ಎತ್ತಿದರೆ ಸಾಕು, ಆಗ ನೋಡಬೇಕು ನೀರಿನ ಅಬ್ಬರ, ಬೆಳ್ನೊರೆಯಾಗಿ ದೂರ ದೂರಕ್ಕೆ ಚಿಮ್ಮಿ ರುದ್ರನರ್ತನ ಮಾಡುತ್ತಾ ರಭಸವಾಗಿ ಹರಿಯುತ್ತದೆ! ಹಾಗೆಯೇ ಮನುಷ್ಯನ ಅಂತರಂಗದಲ್ಲಿರುವ ಒಳ್ಳೆಯತನವನ್ನು ದುರ್ಗುಣಗಳೆಂಬ ಅಣೆಕಟ್ಟು ಅಲುಗಾಡದಂತೆ ತಡೆದು ನಿಲ್ಲಿಸಿರುತ್ತವೆ. ಅವುಗಳನ್ನು ಸರಿಸುವ ಘಟನೆಗಳು ಜರುಗಿದಾಗ ವ್ಯಕ್ತಿಯಲ್ಲಿರುವ ಸುಪ್ತಚೇತನಕ್ಕೆ ಕವಾಟ ತೆರೆದಂತಾಗಿ ಪ್ರಕಟಗೊಳ್ಳುತ್ತದೆ.

ಉದಾಹರಣೆಗೆ ಪುರಂದರದಾಸರ ಜೀವನವೃತ್ತಾಂತವನ್ನೇ ತೆಗೆದುಕೊಳ್ಳಿ. ಅವರ ಮೂಲ ಹೆಸರು ಶೀನಪ್ಪನಾಯಕ; ವೃತ್ತಿಯಲ್ಲಿ ಚಿನ್ನಾಭರಣ ವ್ಯಾಪಾರಿ, ನವಕೋಟಿ ನಾರಾಯಣನೆಂಬ ಖ್ಯಾತಿ ಪಡೆದವನು. ಲಕ್ಷ್ಮಿ ಅವನ ಮನೆಯಲ್ಲಿ ಕಾಲು ಮುರಿದುಕೊಂಡು ಬಿದ್ದಿದ್ದಳು. ತಿಜೋರಿಗಳಲ್ಲಿ ಕೊಳೆತು ಹೋಗುವಷ್ಟು ಹೊನ್ನು. ಏನಾದರೇನು ಆತ ಮಹಾನ್ ಜಿಪುಣ, ಜೀವಮಾನದಲ್ಲಿಯೇ ದಾನ ಧರ್ಮ ಮಾಡಿದವನಲ್ಲ.. ಆತನ ಹೆಂಡತಿ ಮಾತ್ರ ಇದಕ್ಕೆ



ತದ್ವಿರುದ್ಧ, ಮಹಾನ್ ಸಾಧ್ವಿ, ದಾನಪಾರಾಯಣೆ; ಗಂಡ ಕೊಟ್ಟ ಪುಡಿಗಾಸನ್ನೇ ಕೂಡಿಟ್ಟು ದಾನ ಧರ್ಮಗಳಿಗೆ ಬಳಸುತ್ತಿದ್ದಳು. ಬಡ ಯಾಚಕನೊಬ್ಬ ಶೀನಪ್ಪನಾಯಕನ ಅಂಗಡಿಗೆ ಬಂದು ದಾನ ನೀಡಲು ವಿನಮ್ರನಾಗಿ ವಿನಂತಿಸಿದ. ಶೀನಪ್ಪ ಎಂದಿನ ಪ್ರಕಾರ ಕಿಲುಬು ಕಾಸನ್ನೂ ಕೊಡದೆ ಓಡಿಸಿದ. ಆಗ ಅವನು ಶೀನಪ್ಪನ ಮನೆಗೆ ಬಂದು ಮನೆಯೊಡತಿಯನ್ನು ಬೇಡಿದ. ಅವನ ಕಷ್ಟಕ್ಕೆ ಮರುಗಿ ಕೊಡಲೇನೂ ಇಲ್ಲದ್ದರಿಂದ ತನ್ನ ಮೂಗುತಿಯನ್ನೇ ಆ ಸಾಧ್ವಿ ನೀಡಿದಳು. ಆ ಯಾಚಕ ಅದೇ ಮೂಗುತಿಯನ್ನು ಶೀನಪ್ಪನ ಅಂಗಡಿಗೇ ಅಡವಿಡಲು ತಂದಾಗ ಅದು ತನ್ನ ಹೆಂಡತಿಯದೇ ಎಂದು ತಿಳಿದು ಶೀನಪ್ಪ ಕೆಂಡಾಮಂಡಲಗೊಂಡು ಮನೆಗೆ ಧಾವಿಸುತ್ತಾನೆ. ಹೆಂಡತಿಯ ಮೂಗಿನಲ್ಲಿ ರಾರಾಜಿಸುತ್ತಿದ್ದ ವಜ್ರದ ಮೂಗುತಿ ಇಲ್ಲವೆಂಬುದನ್ನು ಗಮನಿಸಿ, ಸಿಟ್ಟಿನಿಂದ ಅದನ್ನು ತಂದು ತೋರಿಸುವಂತೆ ಒತ್ತಾಯಿಸುತ್ತಾನೆ. ಗಂಡನ ಕೋಪವನ್ನು ಅರಿತಿದ್ದ ಆಕೆ ಒಳಗೆ ಹೋಗಿ ವಿಷವನ್ನು ಕುಡಿಯಲು ಮುಂದಾದಾಗ ವಿಷದ ಬಟ್ಟಲಲ್ಲಿ ವಜ್ರದ ಮೂಗುತಿ ಬೀಳುತ್ತದೆ. ಅದನ್ನು ಗಂಡನಿಗೆ ತಂದುಕೊಟ್ಟಾಗ ಶೀನಪ್ಪ ಅಂಗಡಿಗೆ ಓಡಿಹೋಗಿ ನೋಡಿದರೆ ಭದ್ರವಾಗಿ ತಿಜೋರಿಯಲ್ಲಿಟ್ಟಿದ್ದ ಮೂಗುತಿ ಇರುವುದಿಲ್ಲ. ಶೀನಪ್ಪನ ಮನಃಪರಿವರ್ತನೆಗೆ ಹೀಗೆ ದೈವಲೀಲೆ ಕಾರಣ ಎಂದು ಬಿಂಬಿಸಲಾಗಿದೆ. ತಿಜೋರಿಯಲ್ಲಿ ಮೂಗುತಿ ಮಾಯವಾಗಿತ್ತೆಂದು ಹೇಳದೆಯೂ ಇದನ್ನು ಮನೋವೈಜ್ಞಾನಿಕ ದೃಷ್ಟಿಯಿಂದ ನೋಡಲು ಬರುತ್ತದೆ. ಮೂಗುತಿಯನ್ನು ತಂದುಕೊಡಲಾಗದೆ ತನಗೆ ಹೆದರಿ ವಿಷವನ್ನು ಕುಡಿಯಲು ಮುಂದಾದ ತನ್ನ ಪ್ರೀತಿಯ ಹೆಂಡತಿಯ ವರ್ತನೆ ಶೀನಪ್ಪನ ಹೃದಯವನ್ನು ತಟ್ಟಿರಬೇಕು. ಎಷ್ಟೇ ಜಿಪುಣನಾದರೂ ತನ್ನ ಮುದ್ದು ಮಡದಿಯ ಪ್ರಾಣಕ್ಕೇ ಸಂಚಕಾರವಾಗುತ್ತಿದ್ದ ತನ್ನ ಹಣದ ವ್ಯಾಮೋಹ ಎಷ್ಟು ಕೆಟ್ಟದ್ದೆಂದು ಅರಿತಿರಬೇಕು. ಇದಕ್ಕೆ ಪುರಾವೆಯೆಂಬಂತೆ ಪುರಂದರದಾಸರು ತಮ್ಮದೊಂದು ಕೀರ್ತನೆಯಲ್ಲಿ ತಮ್ಮ ಪತ್ನಿಯನ್ನು ಹೀಗೆ ಕೊಂಡಾಡಿದ್ದಾರೆ:

**ದಂಡಿಗೆ ಬೆತ್ತ ಹಿಡಿಯಲು ನಾನು**
**ಮಂಡೆಮಾಚಿ ನಾಚುತ್ತಿದ್ದೆ**
**ಹೆಂಡತಿ ಸಂತತಿ ಸಾವಿರವಾಗಲಿ**
**ದಂಡಿಗೆ ಬೆತ್ತ ಹಿಡಿಸಿದಳಯ್ಯಾ!**

**15.3.2012**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**